ಕರ್ನಾಟಕ ಸರ್ಕಾರ

# ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,

ಲೋಕೋಪಯೋಗಿ ಇಲಾಖೆ, ನಂ. 4ನೇ ಉಪವಿಭಾಗ, ಚನ್ನಗಿರಿ-577213.

ದೂರವಾಣಿ ಮತ್ತು ಫ್ಯಾಕ್ಸ್: 08189-295036 ಇ.ಮೇಲ್-aeecng4@gmail.com

ಸಂಖ್ಯೆ:ಸಕಾಇಂ:ಲೋ.ಇ.ಚ:ಶ್ರೀ.ಬ.ಇ.ನ್ಯಾ.ಶಾ.ಕಟ್ಟಡ:ಸು:ಧೃ:2025-26:177 ದಿನಾಂಕ:07.05.2025

ಗೆ.

ಪ್ರಾಂಶುಪಾಲರು,
ಶ್ರೀ ಬಸವ ಇಂಟರ್ ನ್ಯಾಷನಲ್ ಸ್ಕೂಲ್,
ಮಾಚನಾಯಕನಹಳ್ಳಿ, ಚನ್ನಗಿರಿ.

ಮಾನ್ಯರೇ,

ವಿಷಯ : ಶಾಲಾ ಕಟ್ಟಡಕ್ಕೆ ಕಟ್ಟಡ ಸುರಕ್ಷತೆ ದೃಢೀಕರಣ ಪತ್ರ ನೀಡುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ : 19.09.2020ರಂದು ನಡೆದ ಸಭೆಯ ನಡವಳಿಗಳು.

2) ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರ ಪತ್ರ ಸಂ: ಲೋಇ/59/ಬಿಇಡಿ/2019 ದಿನಾಂಕ : 29.10.2020.

3) ಸರ್ಕಾರದ ಪತ್ರ ಸಂ : ಲೋಇ/59/ಬಿಇಡಿ2019 ಬೆಂಗಳೂರು ದಿನಾಂಕ : 07.05.2022

4) ಸರ್ಕಾರದ ಪತ್ರ ಸಂ : ಲೋಇ/59/ಬಿಇಡಿ2019 ಬೆಂಗಳೂರು ದಿನಾಂಕ : 25.09.2024

5) ತಮ್ಮ ಪತ್ರ ದಿನಾಂಕ :03.03.2025

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (5)ರ ತಮ್ಮ ಪತ್ರದನ್ವಯ ಚನ್ನಗಿರಿ ತಾಲ್ಲೂಕಿನ ಮಾಚನಾಯಕನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿ-76 ರಸ್ತೆಯ ಬಲಭಾಗದಲ್ಲಿರುವ " ಬಸವ ವಿದ್ಯಾಪೀಠ (ರಿ) ಪಾಂಡೋಮಟ್ಟಿ" ರವರ ವತಿಯಿಂದ ಶ್ರೀ 'ಬಸವ ಇಂಟರ್ ನ್ಯಾಷನಲ್ ಸ್ಕೂಲ್" ನಡೆಸಲಾಗುತ್ತಿದ್ದು, ಸದರಿ ಕಟ್ಟಡಕ್ಕೆ ರಾಷ್ಟ್ರೀಯ ಕಟ್ಟಡದ ನಿಯಮಾವಳಿಗಳನ್ವಯ ಕಟ್ಟಡವನ್ನು ಪರಿಶೀಲಿಸಿ ಧೃಢೀಕರಣ ಪತ್ರ ನೀಡುವಂತೆ ಕೋರಿರುತ್ತೀರಿ. ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಲ್ಲಿ ಮಾರ್ಗಸೂಚಿಗಳನ್ವಯ ನಿಗಧಿಪಡಿಸಿದ ನಮೂನೆಗಳು ಹಾಗೂ ಅನುಬಂಧಗಳ ಲಭ್ಯತೆಯ ಆಧಾರದ ಮೇಲೆ, ಈಗಾಗಲೇ ನಿರ್ಮಾಣಗೊಂಡು ಅಸ್ತಿತ್ವದಲ್ಲಿರುವಂತಹ ಕಟ್ಟಡಗಳಿಗೆ ರಚನಾತ್ಮಕ (Structural evalution) ಮೌಲ್ಯಮಾಪನ ಮಾಡಿಸಿ National building code ಮಾನದಂಡಗಳನ್ವಯ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದುಕೊಳ್ಳತಕ್ಕದ್ದು ಎಂದು ನಿರ್ದೇಶಿಸಲಾಗಿರುತ್ತದೆ.

ಉಲ್ಲೇಖ (4)ರ ಸರ್ಕಾರದ ಸುತ್ತೋಲೆಯಲ್ಲಿ "ಅರ್ಜಿಯ ಜೊತೆಗೆ ಕಟ್ಟಡ ಸುರಕ್ಷತೆಯ ಪ್ರಮಾಣ ಪತ್ರವನ್ನು ವಿತರಿಸಲು ಗ್ರಾಮೀಣ ಪ್ರದೇಶದಲ್ಲಿರುವ ಖಾಸಗಿ ಮತ್ತು ಅನುದಾನಿತ ಶಾಲೆಗಳಿಗೆ ರೂ. 1000/- ಹಾಗೂ ನಗರ ಪ್ರದೇಶದಲ್ಲಿ ರೂ.5000/-ಗಳನ್ನು ಮತ್ತು ಸರ್ಕಾರಿ ಶಾಲೆಗಳಿಗೆ ಶುಲ್ಕ ವಿನಾಯಿತಿಯನ್ನು ನೀಡಲಾಗಿರುತ್ತದೆ.

ಸದರಿ ಶಾಲಾ ಕಟ್ಟಡವನ್ನು ದಿನಾಂಕ:27.02.2025 ರಂದು **Department of Studies in Civil Engineering University B.D.T College of Engineering Davanagere** ರವರು ಕಟ್ಟಡವನ್ನು ಪರಿಶೀಲಿಸಲಾಗಿದ್ದು, ಸದರಿ ಕಟ್ಟಡವು ನೆಲ ಮತ್ತು ಮೊದಲನೆ ಅಂತಸ್ತು ಹಾಗೂ ಎರಡನೇ ಮಹಡಿಯ ಕಟ್ಟಡವಾಗಿದ್ದು, ಒಟ್ಟು 30 ಕೊಠಡಿಗಳಿದ್ದು, ಸದರಿ ಕಟ್ಟಡವು ಸಿಮೆಂಟ್ ಇಟ್ಟಿಗೆಗಳಿಂದ ನಿರ್ಮಿಸಿದ ಗೋಡೆಗಳನ್ನು ಹೊಂದಿದ್ದು, ಆರ್.ಸಿ.ಸಿ ಮೇಲ್ಛಾವಣಿ ಹೊಂದಿರುವ ಕಟ್ಟಡಗಳಾಗಿದ್ದು, ಕಬ್ಬಿಣದ ಕಿಟಕಿ ಮತ್ತು ಮರದ ಬಾಗಿಲುಗಳನ್ನು ಹೊಂದಿರುವ ಕಟ್ಟಡವಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. ಸದರಿ ಕಟ್ಟಡವನ್ನು ದಿನಾಂಕ:05.05.2025ರಂದು ಲೋಕೋಪಯೋಗಿ ಇಲಾಖೆಯಿಂದ ಪರಿಶೀಲಿಸಲಾಗಿ ಮೇಲ್ನೋಟಕ್ಕೆ ಪಾಠ ಪ್ರವಚನ ಮಾಡಲು ಸುರಕ್ಷಿತವಾಗಿರುತ್ತದೆ. ಆದ್ದರಿಂದ ಶಾಲಾ ಕಟ್ಟಡಕ್ಕೆ ಕಟ್ಟಡ ಸುರಕ್ಷತೆ ದೃಢೀಕರಣ ಪತ್ರ ನೀಡಲು ಸದರಿ ಕಟ್ಟಡವು ಗ್ರಾಮೀಣ ಪ್ರದೇಶದಲ್ಲಿ ಇರುವುದರಿಂದ ಸರ್ಕಾರದ ಆದೇಶದಂತೆ ರೂ. 1000/-ಗಳ ಶುಲ್ಕವನ್ನು ಕೆ-2 ಮುಖಾಂತರ ಸರ್ಕಾರಕ್ಕೆ **(ಚಲನ್ ನಂ:CR0525005900108411) ದಿನಾಂಕ:07.05.2025** ರಂದು ಜಮಾ ಮಾಡಿ ಸರ್ಕಾರದ ಸುತ್ತೋಲೆಗಳನ್ವಯ ನಿಗಧಿಪಡಿಸಿದ ನಮೂನೆಗಳು ಸಲ್ಲಿಸಿರುವುದರಿಂದ ಶಾಲಾ ಕಟ್ಟಡಕ್ಕೆ ಈ ಕೆಳಕಂಡಂತೆ ದೃಢೀಕರಣ ಪತ್ರವನ್ನು ನೀಡಲಾಗಿದೆ.

ಮುಂದುವರೆದಂತೆ ಸದರಿ ಕಟ್ಟಡವು ಸುಮಾರು 13 ವರ್ಷದ ಕಟ್ಟಡವಾಗಿದ್ದು, ಉಲ್ಲೇಖ 4ರ ಪತ್ರದಲ್ಲಿ ಸರ್ಕಾರ ಆದೇಶದಂತೆ ಹಾಗೂ National Building Code ರನ್ವಯ U.B.D.T College ರವರು ಗರಿಷ್ಠ 3 ವರ್ಷಗಳ ಅವಧಿಯ ವರೆಗೆ ಈ ಕಟ್ಟಡದ N.D.T ಪರೀಕ್ಷಾ ವರದಿ ಚಾಲ್ತಿಯಲ್ಲಿರುತ್ತದೆ ಎಂದು ವರದಿ ನೀಡಿರುತ್ತಾರೆ. ಆದ್ದರಿಂದ ಸದರಿ ಪ್ರಮಾಣ ಪತ್ರವು ಮೂರು ವರ್ಷದ ಮಿತಿಗೆ ಮಾತ್ರ ಚಾಲ್ತಿಯಲ್ಲಿರುತ್ತದೆ ಹಾಗೂ ಪ್ರಕೃತಿ ವಿಕೋಪಗಳಾದ ಅತಿವೃಷ್ಟಿ, ಭೂಕುಸಿತ ಇತ್ಯಾದಿಗಳಿಂದ ಕಟ್ಟಡಕ್ಕೆ ಹಾನಿ ಸಂಭವಿಸಿದಲ್ಲಿ ಕಟ್ಟಡವನ್ನು ಸುಸ್ಥಿತಿಗೆ ತಂದು ಈ ಕಛೇರಿಯಿಂದ ಮತ್ತೊಮ್ಮೆ ಕಟ್ಟಡ ಸುರಕ್ಷತಾ ಧೃಡಿಕರಣ ಪತ್ರ ಪಡೆಯಲು ತಿಳಿಸಿದೆ ಮತ್ತು ಅಗ್ನಿಶಾಮಕ ಇಲಾಖೆಯಿಂದ ಸುರಕ್ಷತಾ ಪ್ರಮಾಣ ಪತ್ರವನ್ನು ತಪ್ಪದೇ ಪಡೆಯಲು ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಉಪವಿಭಾಗ,
ಚನ್ನಗಿರಿ